ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಡಿ.ಸಿ. ಕಂಪೌಂಡ, ಧಾರವಾಡ
ದೂ: 0836-2447469, ಫ್ಯಾಕ್ಸ್: 0836-2447469 ಇ ಮೇಲ್: varthabhavandwd74@gmail.com

ದಿನಾಂಕ 24-12-2016
ವಾವಿಸಂ : 245/118

# ಧಾರವಾಡ ಹಾಲು ಒಕ್ಕೂಟಕ್ಕೆ ಅಗತ್ಯ ಹಣಕಾಸು ನೆರವು ನೀಡಲು ಸಿಧ್ಧ – ಮುಖ್ಯಮಂತ್ರಿ ಸಿದ್ದರಾಮಯ್ಯ




**ಧಾರವಾಡ ಡಿ.24**

915 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹೊಂದಿರುವ ಧಾರವಾಡ,ಹಾವೇರಿ,ಗದಗ ಹಾಗೂ ಉತ್ತರ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ಅಗತ್ಯವಿರುವ ಹಣಕಾಸಿನ ನೆರವನ್ನು ಒದಗಿಸಲು ರಾಜ್ಯ ಸರಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಧಾರವಾಡದ ಲಕಮನಹಳ್ಳಿಯಲ್ಲಿರುವ ಒಕ್ಕೂಟದ ಮುಖ್ಯ ಡೇರಿ ಆವರಣದಲ್ಲಿ ನೂತನ 30 ಮೆಟ್ರಿಕ್ ಟನ್ ಸಾಮರ್ಥ್ಯದ ಹಾಲಿನ ಪುಡಿ ಘಟಕದ ಶಿಲಾನ್ಯಾಸ,ನೂತನ 8 ಮೆ.ಟನ್ ಸಾಮರ್ಥ್ಯದ ಬಾಯ್ಲರ್ ಮತ್ತು ಕೋಲ್‌ಶೆಡ್ ಯಾರ್ಡ್ ಉದ್ಘಾಟಿಸಿ ಅವರು ಮಾತಾನುಡುತ್ತಿದ್ದರು.

ಈ ಹಿಂದೆ 1980 ರ ದಶಕದಲ್ಲಿ ತಾವು ಪಶುಸಂಗೋಪನಾ ಸಚಿವರಾಗಿದ್ದಾಗ ಧಾರವಾಡ ಹಾಲು ಒಕ್ಕೂಟ ಆರಂಭವಾದುದನ್ನು ಸ್ಮರಿಸುತ್ತ ಭಾಷಣ ಆರಂಭಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 55 ಸಂಘಗಳ ಒಕ್ಕೂಟವಾಗಿ ಆರಂಭವಾದ ಇಲ್ಲಿನ ಹಾಲು ಒಕ್ಕೂಟವು ಈಗ 915 ಸಂಘಗಳನ್ನು ಹೊಂದುವ ಮೂಲಕ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಸಂಘಗಳ ಸಂಖ್ಯೆಯನ್ನು 1200 ಕ್ಕೆ ಹೆಚ್ಚಿಸುವ ಗುರಿ ಒಕ್ಕೂಟಕ್ಕೆ ಇರುವದು ಸಂತಸದ ಸಂಗತಿ.ಕರ್ನಾಟಕ ಪ್ರತಿನಿತ್ಯ 72 ಲಕ್ಷ ಹಾಲು ಲೀಟರ್ ಉತ್ಪಾದಿಸುವ ಮೂಲಕ ದೇಶದಲ್ಲಿ ಮುಂಚೂಣಿ ಸ್ಥಾನದಲ್ಲಿದೆ.ಈಗ ಬರಪರಿಸ್ಥಿತಿ ಇರುವದರಿಂದ ದಿನನಿತ್ಯ 2 ಲಕ್ಷ ಲೀಟರ್ ಕುಸಿತವಾಗಿ 70 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ.ವಾರ್ಷಿಕ 1200 ಕೋಟಿ ರೂ.ಪ್ರೋತ್ಸಾಹ ಧನವನ್ನು ರಾಜ್ಯ ಸರಕಾರ ರೈತರಿಗೆ ನೀಡುತ್ತಿದೆ.ಪ್ರತಿನಿತ್ಯ 3.5 ಕೋಟಿ ರೂ.ರೈತರ ಖಾತೆಗಳಿಗೆ ಜಮೆಯಾಗುತ್ತಿದೆ.ರೈತರು ಇನ್ನೂ ಎಷ್ಟೇ ಪ್ರಮಾಣದಲ್ಲಿ ಹಾಲು ಉತ್ಪಾದಿಸಿದರೂ ಸಹ ಸರಕಾರ ಪ್ರೋತ್ಸಾಹ ಧನ ನೀಡಲು ಸಿದ್ಧವಿದೆ.ಹೆಚ್ಚು ಹಾಲು ನೀಡುವ ಆಕಳು ತಳಿಗಳನ್ನು ಗುರುತಿಸಿ ರೈತರು ಸಾಕಾಣೆ ಮಾಡಬೇಕು ಆಗಮಾತ್ರ ಹೈನುಗಾರಿಕೆಯಿಂದ ಲಾಭಗಳಿಸಲು ಸಾಧ್ಯ .

ಸಮಗ್ರ ಕರ್ನಾಟಕದ ಅಭಿವೃದ್ಧಿ ನಮ್ಮ ಧ್ಯೇಯವಾಗಿದೆ.ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ದೇಶದಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನದಲ್ಲಿದ್ದರೆ.ಕರ್ನಾಟಕ ಎರಡನೇ ಸ್ಥಾನದಲ್ಲಿದೆ.ಕರ್ನಾಟಕ ಏಕೀಕರಣದ ನಂತರವೂ ನಮ್ಮ ರಾಜ್ಯದ ಕೆಲವು ಭಾಗಗಳು ಹಿಂದುಳಿಯಲು ಅನೇಕ ಚಾರಿತ್ರಿಕ ಕಾರಣಗಳಿವೆ.ಪ್ರಾದೇಶಿಕ ಸಮತೋಲನಕ್ಕಾಗಿ ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಕಾರ್ಯದ

ಅವಧಿ 8 ವರ್ಷಗಳಿಗೆ ಇದ್ದುದನ್ನು ಇನ್ನೂ 5 ವರ್ಷಗಳಿಗೆ ಹೆಚ್ಚಿಸಿ,ಪ್ರತಿವರ್ಷ 3 ಸಾವಿರ ರಕೋಟಿ ರೂ.ಒದಗಿಸಲಾಗುತ್ತಿದೆ.ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ 371 ಜೆ ಕಲಮಿನಡಿ ಪ್ರತಿ ವರ್ಷ 1 ಸಾವಿರ ಕೋಟಿ ರೂ.ಗಳನ್ನು ಅಭಿವೃದ್ಧಿಗಾಗಿ ನೀಡಲಾಗುತ್ತಿದೆ.ಒಟ್ಟು ಕರ್ನಾಟಕ ಅಭಿವೃದ್ಧಿಯಾದರೆ ಮಾತ್ರ ರಾಜ್ಯದ ತಲಾವಾರು ಆದಾಯ ಹೆಚ್ಚಾಗುತ್ತದೆ.ರಾಜ್ಯದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಕನಿಷ್ಠ 1 ಲಕ್ಷ ಕೋಟಿ ರೂ.ಬೇಕು.ಕೃಷ್ಣಾ ಮೇಲ್ದಂಡೆ ಯೋಜನೆಗೆ ಈ ಹಿಂದೆ 17 ಸಾವಿರ ಕೋಟಿ ರೂ. ಸಾಕಾಗಿತ್ತು.ಈಗ ಭೂಸ್ವಾಧೀನ,ಪುನರ್ವಸತಿ ಸೇರಿ 55 ಸಾವಿರ ಕೋಟಿ ರೂಪಾಯಿಗಳಿಗೆ ಏರಿದೆ.ನಾವು ಅಧಿಕಾರಕ್ಕೆ ಬರುವಾಗ ವಾಗ್ದಾನ ಮಾಡಿದಂತೆ 50 ಸಾವಿರ ಕೋಟಿ ರೂ.ಗಳನ್ನು ನೀಡಿದ್ದೇವೆ.



ಕಳಸಾ ಬಂಡೂರಿ ,ಮಹಾದಾಯಿ ನದಿ ವಿವಾದದಲ್ಲಿ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸಲು ಸಂವಿಧಾನಿಕ ಅಥವಾ ಕಾನೂನು ತೊಡಕುಗಳಿಲ್ಲ.ಈ ವಿಷಯದಲ್ಲಿ ತಾವು ರಾಜಕೀಯ ಮಾಡುವುದಿಲ್ಲ.ರೈತರ ಹಿತಾಸಕ್ತಿಯೇ ಮುಖ್ಯ 2013 ರ ಮೇ 13 ರಂದು ಬಸವ ಜಯಂತಿಯಂದು ಪ್ರಮಾಣ ವಚನ ಸ್ವೀಕರಿಸಿ ಅಧಿಕಾರಕ್ಕೆ ಬಂದ ನಾನು,ಬಸವಣ್ಣನವರ ಕಾಯಕ ,ದಾಸೋಹದ ಕಲ್ಪನೆಗಳ ಆಧಾರದಲ್ಲಿಯೇ ಅನ್ನಭಾಗ್ಯ ಯೋಜನೆ ಆರಂಭಿಸಿದ್ದೇನೆ. ಇದರಿಂದ ಈ ಭೀಕರ ಬರದಲ್ಲಿಯೂ ಜನರು ಗುಳೆ ಹೋಗುವ ಪ್ರಮಾಣ ಬಹಳ ಕಡಿಮೆಯಾಗಿದೆ.ಬಸವಣ್ಣ,ಅಂಬೇಡ್ಕರ್ ಅವರ ಸಮಾನತೆಯ ಕಲ್ಪನೆಗೆ ಸರಕಾರ ಬದ್ಧವಾಗಿದೆ.ಮಕ್ಕಳ ಅಪೌಷ್ಠಿಕತೆ ನಿವಾರಣೆ,ಶಾಲಾ ಹಾಜರಾತಿ ಹೆಚ್ಚಳಕ್ಕಾಗಿ 2017 ರ ಏಪ್ರೀಲ್ ಒಂದರಿಂದ ವಾರದಲ್ಲಿ 3 ದಿನ ನೀಡುವ ಹಾಲನ್ನು 5 ದಿನಗಳಿಗೆ ಹೆಚ್ಚಿಸಲಾಗುವದು.ಇದರಿಂದ ಹಾಲು ಉತ್ಪಾದಕರಿಗೂ ಪ್ರೋತ್ಸಾಹ ಸಿಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆ ಅಧ್ಯಕ್ಷ ಕೆ.ಬಿ.ಕೋಳಿವಾಡ,ಸಹಕಾರ ಮತ್ತು ಸಕ್ಕರೆ ಸಚಿವ ಹೆಚ್.ಎಸ್.ಮಹದೇವ ಪ್ರಸಾದ ,ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಎ.ಮಂಜು,ಗಣಿ,ಭೂವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ,ಶಾಸಕರಾದ ಬಸವರಾಜ ಹೊರಟ್ಟಿ,ಬಸವರಾಜ ಬೊಮ್ಮಾಯಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜವಳಿ ಮತ್ತು ಮುಜರಾಯಿ ಸಚಿವ ರುದ್ರಪ್ಪ ಲಮಾಣಿ,ಶಾಸಕ,ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್.ಪಾಟೀಲ,ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಸಿ.ಎಸ್.ಶಿವಳ್ಳಿ,ಶಾಸಕರಾದ ಎನ್.ಹೆಚ್.ಕೋನರಡ್ಡಿ,ಪ್ರಸಾದ ಅಬ್ಬಯ್ಯ,ಗದಗ ಜಿ.ಪಂ.ಅಧ್ಯಕ್ಷ ವಾಸಣ್ಣ ಕುರಡಗಿ,ಹು-ಧಾ ಮಹಾನಗರಪಾಲಿಕೆ ಮೇಯರ್ ಮಂಜುಳಾ ರವಿ ಅಕ್ಕೂರ,ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ರವೀಂದ್ರ ಕಲಬುರ್ಗಿ,ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ವೇದವ್ಯಾಸ ಕೌಲಗಿ,ವಾಕರಸಾ ಸಂಸ್ಥೆ ಅಧ್ಯಕ್ಷ ಸದಾನಂದ ಡಂಗನವರ,ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ನಾಗರಾಜ ಛಬ್ಬಿ,ಹುಡಾ ಅಧ್ಯಕ್ಷ ಅನ್ವರ್ ಮುಧೋಳ,ಕೆ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಐ.ಎಸ್.ಪಾಟೀಲ,ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ವ್ಯವಸ್ಥಾಪಕ ನಿರ್ದೇಶಕ ರಾಕೇಶ ಸಿಂಗ್,ಜಿಲ್ಲಾಧಿಕಾರಿ ಎಸ್.ಬಿ.ಬೊಮ್ಮನಹಳ್ಳಿ,ಧಾರವಾಡ ಹಾಲು ಒಕ್ಕೂಟದ ಎಂ.ಡಿ.ಡಾ.ಜಿ.ವಿ.ಹೆಗಡೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಧಾರವಾಡ ಹಾಲು ಒಕ್ಕೂಟದ ಅಧ್ಯಕ್ಷ ನೀಲಕಂಠಪ್ಪ ಶಿವಪ್ಪ ಅಸೂಟಿ ಪ್ರಸ್ತಾವಿಕವಾಗಿ ಮಾತನಾಡಿ ಒಕ್ಕೂಟದ ಅಭಿವೃದ್ಧಿಗೆ 37.50 ಕೋಟಿ ರೂ.ಗಳ ನೆರವು ಕೋರಿದರು.ಒಕ್ಕೂಟದ ನಿರ್ದೇಶಕ ಬಸವರಾಜ ಅರಬಗೊಂಡ ಸ್ವಾಗತಿಸಿದರು.ಶಂಕರಪ್ಪ ಮುಗದ ವಂದಿಸಿದರು.

--------------